KACD320021952024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ
ನ್ಯಾಯಾಲಯ, ಹಿರಿಯೂರು

ಉಪಸ್ಥಿತರುಃ **ಶ್ರೀಮತಿ. ಪಾರ್ವತಮ್ಮ.ಬಿ.,**
**ಬಿ.ಎ., ಎಲ್.ಎಲ್.ಎಂ.**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಹಿರಿಯೂರು.**

**ದಿನಾಂಕಃ 13 ನೇ ಜುಲೈ – 2026.**

**ಸಿ.ಸಿ.ಸಂಃ 1208/2024**

ಕರ್ನಾಟಕ ರಾಜ್ಯದ ಪರವಾಗಿ
ಹಿರಿಯೂರು ನಗರ ಪೊಲೀಸ್ ಠಾಣೆ
ಹಿರಿಯೂರು. – **ದೂರುದಾರರು**

**(ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**– ವಿರುದ್ಧ –**

1) ಮಂಜುನಾಥ,
ಬಿನ್ ಕಲ್ಲಹಳ್ಳಿರಂಗಪ್ಪ,
ಸುಮಾರು 32 ವರ್ಷ,
ವಾಸಃ ಹರಿಶ್ಚಂದ್ರಘಾಟ್
ಹಿರಿಯೂರು ಟೌನ್ . – **ಆರೋಪಿತ**

**(ಆರೋಪಿ ಪರ ವಕೀಲರುಃ ಶ್ರೀ. ವೈ. ಆರ್. ಕೆ.,)**

1. ಅಪರಾಧ ಪ್ರಾರಂಭಗೊಂಡ ದಿನಾಂಕ - 08.04.2024

2. ಅಪರಾಧ ವರದಿಗೊಂಡ ದಿನಾಂಕ - 08.04.2024

3. ದೂರುದಾರರ ಹೆಸರು - ದುರ್ಗೇಶ್. ಬಿ

4. ಸಾಕ್ಷಿ ವಿಚಾರಣೆ ಪ್ರಾರಂಭಗೊಂಡ ದಿನಾಂಕ - 16.07.2025

5. ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ - 18.03.2026

6. ಆಪಾದಿಸಲಾದ ಅಪರಾಧದ ಕಾಯ್ದೆಗಳು - ಭಾ.ದಂ.ಸಂ.ಕಲಂಃ332 323,504,506 ಹಾಗೂ 353

7. ನ್ಯಾಯಾಧೀಶರ ಅಭಿಪ್ರಾಯ - ಆರೋಪಿ ನಿರ್ದೋಷಿ

## ತೀರ್ಪು

ಪ್ರಸ್ತುತ ಪ್ರಕರಣದಲ್ಲಿ, ಹಿರಿಯೂರು ನಗರ ಪೊಲೀಸ್ ಠಾಣೆಯ ಆರಕ್ಷಕ ಉಪ-ನಿರೀಕ್ಷಕರು ಆರೋಪತನ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.323, 332, 504, 506 ಹಾಗೂ 353 ರಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಎಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-**

ಸಾಕ್ಷಿ-1 ರವರು ಹಿರಿಯೂರು ನಗರದ ನಗರ ಸಭೆಯಲ್ಲಿ ಅನ್ಯ ಕರ್ತವ್ಯ ನಿಮಿತ್ತ (ಓ.ಓ.ಡಿ) ಆರೋಗ್ಯ ನಿರೀಕ್ಷಕರಾಗಿ ಮತ್ತು ಪೌರ ಕಾರ್ಮಿಕರ ಅಧ್ಯಕ್ಷರಾಗಿ

ಸರ್ಕಾರಿ ಕರ್ತವ್ಯ ನಿರ್ವಹಿಸಿಕೊಂಡಿದ್ದು, ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಸಮಯದಲ್ಲಿ ಸಾಕ್ಷಿ-1 ರವರು ಹಿರಿಯೂರು ನಗರದ ಹೊಸ ನಗರ ಸಭೆ ಕಟ್ಟಡದ ಮುಂಭಾಗ ಸಾಕ್ಷಿ-5 ರಿಂದ 7 ರವರಿಗೆ ಕರ್ತವ್ಯಕ್ಕೆ ನೇಮಕ ಮಾಡುತ್ತಿರುವಾಗ ಆರೋಪಿತನು ಏಕಾಏಕಿಯಾಗಿ ಬಂದು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಸಾಕ್ಷಿ-1 ರವರ ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಸಾಕ್ಷಿ-1 ರವರಿಗೆ ಬೋಳಿ ಮಗನೇ ಕಮಿಷನರ್ ಪರವಾಗಿ ಕೆಲಸ ಮಾಡುತ್ತೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ, ಬಲಗೈಯಿಂದ ಸಾಕ್ಷಿ-1 ರವರ ಎಡಗೆನ್ನೆಗೆ, ಕೈಕಾಲುಗಳಿಂದ ಮೈ ಕೈ ಗೆ ಹೊಡೆದು ನೋವುಂಟು ಮಾಡಿದ್ದು. ಸಾಕ್ಷಿ-1 ರವರ ಮೇಲ್ಬಾಗದ ತುಟಿಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ಗಾಯವಾಗಿದ್ದಲ್ಲದೇ, ಸಾಕ್ಷಿ-1 ರವರಿಗೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಸಾಕ್ಷಿ-1 ರವರಿಗೆ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾನೆ ಎಂದು ಆರೋಪಿಸಿ ಈ ಮೂಲಕ ಹಿರಿಯೂರು ನಗರ ಪೊಲೀಸ್ ಠಾಣಾ ಪೊಲೀಸರು ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ತನಿಖಾಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಕಲಂ.323, 332, 504, 506 ಹಾಗೂ 353 ರಡಿಯಲ್ಲಿನ ಅಪರಾಧಗಳಿಗೆ ಸಂಜ್ಞೆಯನ್ನು

ತೆಗೆದುಕೊಂಡಿದೆ. ನಂತರ ದಂ.ಪ್ರ.ಸಂ.ಕಲಂ 207 ರಡಿಯಲ್ಲಿ ಆರೋಪಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಪೂರೈಸಲಾಗಿದೆ.

**4.** ಆರೋಪಿತನ ವಿರುದ್ಧ ನ್ಯಾಯಾಲಯವು ಭಾ.ಕಲಂ.323, 332, 504, 506 ಹಾಗೂ 353 ರಡಿಯಲ್ಲಿನ ಅಪರಾಧಗಳಿಗಾಗಿ ಆರೋಪಣೆಯನ್ನು ರಚಿಸಿ ನಂತರ ಆರೋಪಿಗೆ ತಿಳಿಯಪಡಿಸಿ ಓದಿ ವಿವರಿಸಿ ಹೇಳಲಾಗಿದ್ದು, ನಂತರ ಆರೋಪಿತನು ತಾನು ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**5.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಿಸಿ ದೂರುದಾರರಾದ ಚಾಸಾ-1 **ದುರ್ಗೇಶ್** ರವರನ್ನು ಫ್ರಾಸಾ-1 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 **ದಿವಾಕರ** ರವರನ್ನು ಫ್ರಾಸಾ-2 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 **ನಾಗರಾಜ್** ರವರನ್ನು ಫ್ರಾಸಾ-3 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-5 **ದೇವರಾಜ** ರವರನ್ನು ಫ್ರಾಸಾ-4 ಎಂದು, ಪಂಚನಾಮೆ ಸಾಕ್ಷಿದಾರರಾದ ಚಾಸಾ-6 **ಟಿ. ದ್ಯಾಮಣ್ಣ** ರವರನ್ನು ಫ್ರಾಸಾ-5 ಎಂದು, ಪಂಚನಾಮೆ ಸಾಕ್ಷಿದಾರರಾದ ಚಾಸಾ-7 **ದುರ್ಗೇಶ್** ರವರನ್ನು ಫ್ರಾಸಾ-6 ಎಂದು, ಭಾಗಶಃ ತನಿಖಾಧಿಕಾರಿಗಳಾದ ಚಾಸಾ-14 **ಶಶಿಕಲಾ** ರವರನ್ನು ಫ್ರಾಸಾ-7 ಎಂದು, ಭಾಗಶಃ ತನಿಖಾಧಿಕಾರಿಗಳಾದ ಚಾಸಾ-13 **ನಾಗರಾಜ್. ಟಿ. ಎಂ.** ರವರನ್ನು ಫ್ರಾಸಾ-8 ಎಂದು, ವಿಚಾರಣೆ ಮಾಡಿ,

ಅವರ ಮೂಲಕ ನಿಪಿ-1 ರಿಂದ ನಿಪಿ-9 ರ ದಾಖಲೆಗಳನ್ನು ಸಾಕ್ಷ್ಯದಲ್ಲಿ ಹಾಜರುಪಡಿಸಿರುತ್ತಾರೆ. ವಿಚಾರಣೆ ಮಾಡಲಾದ ಫ್ರಾಸಾ-1, 2, 6 ರಿಂದ 8 ರವರ ಸಾಕ್ಷ್ಯದಲ್ಲಿ ಆರೋಪಿಗಳ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರುವುದರಿಂದ ಆರೋಪಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ವಿಚಾರಣೆ ಮಾಡಿ ಆರೋಪಿಯ ಉತ್ತರವನ್ನು ದಾಖಲು ಮಾಡಿಕೊಳ್ಳಲಾಗಿದೆ ಮತ್ತು ಆರೋಪಿತನು ತನ್ನ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇಲ್ಲ ಎಂದು ಉತ್ತರಿಸಿರುತ್ತಾರೆ.

6. ಉಭಯ ಪಕ್ಷಗಾರರ ವಾದವನ್ನು ಆಲಿಸಿ ಕಡತವನ್ನು ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ.

1. ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಸಾಕ್ಷಿ-1 ರವರು ಹಿರಿಯೂರು ನಗರದ ಹೊಸ ನಗರ ಸಭೆ ಕಟ್ಟಡದ ಮುಂಭಾಗ ಸಾಕ್ಷಿ-5 ರಿಂದ 7 ರವರಿಗೆ ಕರ್ತವ್ಯಕ್ಕೆ ನೇಮಕ ಮಾಡುತ್ತಿರುವಾಗ ಆರೋಪಿತನು ಏಕಾ ಏಕಿಯಾಗಿ ಬಂದು ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಸಾಕ್ಷಿ-1 ರವರ ಕರ್ತವ್ಯಕ್ಕೆ ಅಡ್ಡಿ ಪಡಿಸುವ ಮೂಲಕ ಆರೋಪಿ ಭಾರತೀಯ ದಂಡ ಸಂಹಿತೆಯ ಕಲಂ.353 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ?

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಸಾಕ್ಷಿ-1 ರವರಿಗೆ ಬೋಳಿ ಮಗನೇ ಕಮಿಷನರ್

ಪರವಾಗಿ ಕೆಲಸ ಮಾಡುತ್ತೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.504 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**3.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಸಾಕ್ಷಿ-1 ರವರ ಎಡಗೆನ್ನೆಗೆ, ಕೈಕಾಲುಗಳಿಂದ ಮೈ ಕೈ ಗೆ ಹೊಡೆದು ನೋವುಂಟು ಮಾಡಿದ್ದು. ಸಾಕ್ಷಿ-1 ರವರ ಮೇಲ್ಬಾಗದ ತುಟಿಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.323 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**4.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು, ಚಾಸಾ-1 ರವರು ಧರಿಸಿದ್ದ ಸಮವಸ್ತ್ರವನ್ನು ಹಿಡಿದು ಎಳೆದಾಡುವ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ.332 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**5.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ-1 ರವರಿಗೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕುವ ಮೂಲಕ

ಭಾರತೀಯ ದಂಡ ಸಂಹಿತೆಯ ಕಲಂ.506 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

6. ಯಾವ ಆದೇಶ ?

7. ಮೇಲ್ಕಂಡ ಅಂಶಗಳಿಗೆ ನಾನು ಈ ಕೆಳಕಂಡಂತೆ ಉತ್ತರಿಸುತ್ತೇನೆ.

| | | |
|---|---|---|
| ಅಂಶ ನಂಃ 1 ರಿಂದ 5 | – | ನಕಾರಾತ್ಮಕವಾಗಿ |
| ಅಂಶ ನಂಃ 6 | – | ಅಂತಿಮ ಆದೇಶದಂತೆ |

ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

8.**ಅಂಶ ನಂಃ1 ರಿಂದ 5ಃ**– ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಮತ್ತು ಅಂಶ–1 ರಿಂದ 5 ರವರೆಗಿನ ಸಾರಾಂಶಗಳು ಪರಸ್ಪರ ಹೊಂದಿಕೊಂಡಿರುವ ಕಾರಣ ಅವುಗಳನ್ನು ಒಟ್ಟಿಗೆ ವಿಮರ್ಶೆ ಮಾಡಲಾಗಿದೆ.

ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರಕರಣದ ದೂರುದಾರರಾದ ಸಾಕ್ಷಿದಾರರಾದ ಚಾಸಾ–1 ರವರನ್ನು ಫ್ರಾಸಾ–1 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ08.04.2024 ರಂದು ಆರೋಪಿ ತನ್ನನ್ನು ಕಮೀಷನರ್ ಪರವಾಗಿ ಮಾತನಾಡುತ್ತೀಯಾ ಎಂದು ನನಗೆ ಅವಾಚ್ಯ

ಶಬ್ಧಗಳಿಂದ ಬೈದು ತನ್ನ ಎಡಗಡೆ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾರೆ ಮತ್ತು ಕೈಕಾಲುಗಳಿಂದ ಹೊಡೆದಿರುತ್ತಾರೆ. ನಂತರ ನನಗೆ ಆರೋಪಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಇದರಿಂದ ತನ್ನ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ, ನಂತರ ಚಾಸಾ-2 ಮತ್ತು 3 ರವರು ಗಲಾಟೆಯನ್ನು ಬಿಡಿಸಿರುತ್ತಾರೆ ನಂತರ ತಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಂತರ ಅದೇ ದಿನ ಪೊಲೀಸ್‌ರು ಸ್ಥಳ ಪಂಚನಾಮೆಗಾಗಿ ಘಟನಾ ಸ್ಥಳಕ್ಕೆ ಬಂದಿದ್ದು ತಾನು ತೋರಿಸಿಕೊಟ್ಟಂತೆ ಚಾಸಾ-6 ಮತ್ತು 7 ರವರ ಸಮಕ್ಷಮ ಪಂಚನಾಮೆಯನ್ನು ಜರುರಿಸಿರುತ್ತಾರೆ. ಈ ಕುರಿತು ತಾನು ಪೊಲೀಸ್‌ರಿಗೆ ಮರು ಹೇಳಿಕೆ ನೀಡಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

**9.** ಫ್ರಾಸಾ-1 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಅವರು ತಮ್ಮ ಪಾಟೀ ಸವಾಲಿನಲ್ಲಿ ತಾನು ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆಗೆ ನಗರಸಭೆ ಆವರಣದಲ್ಲಿ ಇದ್ದೆ. ಆರೋಪಿ ತನಗೆ ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ. ಆರೋಪಿ ತನ್ನ ಎಡಕೆನ್ನೆಗೆ ಹೊಡೆದಿಲ್ಲ ಬದಲಾಗಿ ತನ್ನ ಕೈಹಿಡಿದು ಎಳೆದಾಡಿರುತ್ತಾರೆ. ಆರೋಪಿ ತನ್ನ ಕೈಕಾಲುಗಳಿಗೆ ಹೊಡೆದಿಲ್ಲ. ಸಂಬಳದ ವಿಚಾರಕ್ಕೆ ಜಗಳ ಆಗಿರುತ್ತದೆ ಅದನ್ನು ನಿಪಿ-1 ರಲ್ಲಿ ಹೇಳಿರುವುದಿಲ್ಲ. ಆರೋಪಿ ಏಕಾ ಏಕಿ ಗಲಾಟೆ ಮಾಡಿರುತ್ತಾರೆ ಎಂದು ನಿಪಿ-1 ರಲ್ಲಿ ಬರೆಸಿರುವುದು ಸರಿ ಇರುವುದಿಲ್ಲ. ಆರೋ

ಪಿ ತನಗೆ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ. ಆರೋಪಿ ತನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿ. ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ತಾನು ಹೇಳುವಂತೆ ಯಾವುದೇ ಗಲಾಟೆಯಾಗಿಲ್ಲ, ಪೊಲೀಸ್‌ರು ಯಾವುದೇ ಪಂಚನಾಮೆ ಮಾಡಿಲ್ಲ, ತಾನು ಘಟನಾ ಸ್ಥಳವನ್ನು ಪೊಲೀಸ್‌ರಿಗೆ ತೋರಿಸಿಲ್ಲ ಈಗ ತಾನು ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ ಎಂದು ಉತ್ತರಿಸಿರುತ್ತಾರೆ.

10. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ರವರನ್ನು ಫ್ರಾಸಾ-2 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ08.04.2024 ರಂದು ಆರೋಪಿ ಮತ್ತು ಚಾಸಾ-1 ರವರ ನಡುವೆ ಜಗಳ ಆಗಿರುತ್ತದೆ. ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಅವರ ಎಡಗಡೆ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾರೆ ಮತ್ತು ಕೈಕಾಲುಗಳಿಂದ ಹೊಡೆದಿರುತ್ತಾರೆ. ಇದರಿಂದ ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ. ನಂತರ ತಾನು ಮತ್ತು ಚಾಸಾ-2 ರವರು ಗಲಾಟೆಯನ್ನು ಬಿಡಿಸಿರುತ್ತೇವೆ. ನಂತರ ಚಾಸಾ-1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. ಈ ಕುರಿತು ತಾನು ಪೊಲೀಸ್‌ರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-2 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ

ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-1 ರವರಿಗೆ ಸೂಳೆಮಗನೇ ಬೋಳಿಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಆರೋಪಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಆರೋಪಿ ಕೈಕಾಲುಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ನಾನು ಚಾಸಾ-2 ರವರು ಗಲಾಟೆ ಬಿಡಿಸಿರುತ್ತೇವೆ ಎಂದರೆ ಸರಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

11. ಫ್ರಾಸಾ-2 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಅವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-1 ಮತ್ತು 2 ರವರ ನಡುವೆ ಹಳೇ ದ್ವೇಷಕ್ಕಾಗಿ ಗಲಾಟೆ ನಡೆದಿರುತ್ತದೆ. ಮಧ್ಯಾಹ್ನ 11.00 ರಿಂದ 12.00 ಗಂಟೆವರೆಗೆ ಗಲಾಟೆ ನಡೆದಿರುತ್ತದೆ. ಗಲಾಟೆ ಯಾವ ರೀತಿ ಆಯಿತು ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಕರ್ತವ್ಯಕ್ಕೆ ಆರೋಪಿ ಅಡ್ಡಿಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸ್‌ರ ಮುಂದೆ ಹೇಳಿಕೆ ನೀಡಿದ ಬಗ್ಗೆ ನನಗೆ ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂಬುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

12. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ರವರನ್ನು ಫ್ರಾಸಾ-3 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಗರಸಭೆ ಕಛೇರಿ ಮುಂದೆ ಗಲಾಟೆ ನಡೆಯುತ್ತಿತ್ತು. ಗಲಾಟೆ ಯಾರ ಯಾರ ಮಧ್ಯ ನಡೆಯುತ್ತಿತ್ತು ಎಂದು ತನಗೆ ಗೊತ್ತಿಲ್ಲ. ನಂತರ ಏನಾಯಿತು ಎಂದು ತನಗೆ ಗೊತ್ತಿಲ್ಲ. ಪೊಲೀಸ್‌ರು ತನ್ನನ್ನು ವಿಚಾರಣೆ ಮಾಡಿರುತ್ತಾರೆ, ತಾನು ಪೊಲೀಸ್‌ರಿಗೆ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಫ್ರಾಸಾ-3 ರವರನ್ನು ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದ ಅಂಶಗಳನ್ನು ಹೊರತರುವಲ್ಲಿ ವಿಫಲರಾಗಿರುತ್ತಾರೆ.

13. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-5 ರವರನ್ನು ಫ್ರಾಸಾ-4 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಗರಸಭೆ ಕಛೇರಿ ಮುಂದೆ ಗಲಾಟೆ ನಡೆಯುತ್ತಿತ್ತು. ಗಲಾಟೆ ನಡೆಯುವಾಗ ತುಂಬಾ ಜನರು ಸೇರಿದ್ದರು ಆದ್ದರಿಂದ ಗಲಾಟೆ ಯಾರ ಯಾರ ಮಧ್ಯ ನಡೆಯುತ್ತಿತ್ತು ಎಂದು ತನಗೆ ಗೊತ್ತಾಗಲಿಲ್ಲ. ಪೊಲೀಸ್‌ರು ತನ್ನನ್ನು ವಿಚಾರಣೆ

ಮಾಡಿರುವುದಿಲ್ಲ ಮತ್ತು ತಾನು ಪೊಲೀಸ್‌ರಿಗೆ ಹೇಳಿಕೆ ನೀಡಿರುವುದಿಲ್ಲ. ಎಂದು ಸಾಕ್ಷ್ಯ ನುಡಿದ ಪರಿಣಾಮ, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ, ಕೇಳಿದ ಎಲ್ಲಾ ವಿಚಾರಗಳನ್ನು ಅಲ್ಲಗಳೆದಿರುತ್ತಾರೆ.

**14.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪಂಚನಾಮೆ ಸಾಕ್ಷಿದಾರರಾದ ಚಾಸಾ-6 ರವರನ್ನು ಫ್ರಾಸಾ-5 ಎಂದು ವಿಚಾರಣೆಗೊಳಪಡಿಸಿದ್ದು, ತಾನು ನಿಪಿ-2 ಮತ್ತು 5 ಕ್ಕೆ ಈಗ ಎರಡು ವರ್ಷಗಳ ಹಿಂದೆ ಹಿರಿಯೂರು ನಗರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪೊಲೀಸ್‌ರು ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದ ಪರಿಣಾಮ, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ, ಕೇಳಿದ ಎಲ್ಲಾ ವಿಚಾರಗಳನ್ನು ಅಲ್ಲಗಳೆದಿರುತ್ತಾರೆ.

**15.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪಂಚನಾಮೆ ಸಾಕ್ಷಿದಾರರಾದ ಚಾಸಾ-7 ರವರನ್ನು ಫ್ರಾಸಾ-6 ಎಂದು ವಿಚಾರಣೆಗೊಳಪಡಿಸಿದ್ದು, ತಾನು ನಿಪಿ-2 ಮತ್ತು 5 ಕ್ಕೆ ಈಗ ಎರಡು ವರ್ಷಗಳ ಹಿಂದೆ ಹಿರಿಯೂರು ನಗರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪೊಲೀಸ್‌ರು ತನ್ನ

ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದ ಪರಿಣಾಮ, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ, ಕೇಳಿದ ಎಲ್ಲಾ ವಿಚಾರಗಳನ್ನು ಅಲ್ಲಗಳೆದಿರುತ್ತಾರೆ.

**16.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಭಾಗಶಃ ತನಿಖಾಧಿಕಾರಿಯಾದ ಚಾಸಾ-14 ರವರನ್ನು ಫ್ರಾಸಾ-7 ಎಂದು ವಿಚಾರಣೆಗೊಳಪಡಿಸಿದ್ದು, ದಿನಾಂಕಃ29.08.2024 ರಂದು ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ ಅದೇ ದಿನ ಚಾಸಾ-1 ರವರ ಕರ್ತವ್ಯ ಧೃಢೀಕರಣ ಪತ್ರವನ್ನು ನಿಪಿ-7 ರಂತೆ ಚಾಸಾ-8 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದಲ್ಲಿ ತನಿಖೆ ಮುಕ್ತಾಯಗೊಂಡಿದ್ದು ಆರೋಪಿಯ ಮೇಲೆ ಮೇಲ್ನೋಟಕ್ಕೆ ಆರೋಪ ಸಾಬೀತಾಗಿದ್ದರಿಂದ ಆರೋಪಿ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**17.** ಫ್ರಾಸಾ-7 ರವರನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಅವರು ತಮ್ಮ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಪ್ರಶ್ನೆಗಳನ್ನು ನಿರಾಕರಿಸಿರುತ್ತಾರೆ.

18. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಸಾಬೀತುಪಡಿಸಲು ಭಾಗಶಃ ತನಿಖಾಧಿಕಾರಿಯಾದ ಚಾಸಾ-13 ರವರನ್ನು ಪ್ರಾಸಾ-8 ಎಂದು ವಿಚಾರಣೆಗೊಳಪಡಿಸಿದ್ದು, ದಿನಾಂಕಃ 31.05.2024 ರಂದು ಈ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿ ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಸ್ವೀಕರಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

19. ಪ್ರಾಸಾ-8 ರವರನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಅವರು ತಮ್ಮ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಪ್ರಶ್ನೆಗಳನ್ನು ನಿರಾಕರಿಸಿರುತ್ತಾರೆ.

20. ಅಭಿಯೋಜನೆಯು ತನ್ನ ಪ್ರಕರಣದಂತೆ, ಆರೋಪಿತನ ವಿರುದ್ಧ ಹೊರಿಸಿರುವ ಆರೋಪಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲೆ ಇರುತ್ತದೆ.

21. ಈ ಪ್ರಕರಣದ ದೂರುದಾರರಾದ ದುರ್ಗೇಶ್ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಾಗ ಆರೋಪಿಯು ತನ್ನನ್ನು ಕುರಿತು ಕಮೀಷ್ನರ್ ಪರವಾಗಿ

ಮಾತನಾಡುತ್ತೀಯ ಎಂದು ಅವಾಚ್ಯ ಶಬ್ದಗಳಿಂದ ಬೈದು ಎಡಗಡೆ ಕಪಾಳಕ್ಕೆ ಕೈಯಿಂದ ಹೊಡೆದು ಪ್ರಾಣ ಬೆದರಿಕೆ ಹಾಕಿದ ಎಂದು ಸಾಕ್ಷ್ಯವನ್ನು ನುಡಿದಿದ್ದು ನಿಪಿ-1 ದೂರಿನಲ್ಲಿ ಆರೋಪಿ ಹಳೆಯ ದ್ವೇಷದ ಹಿನ್ನಲೆಯಲ್ಲಿ ತನ್ನ ಕರ್ವ್ಯಕ್ಕೆ ಅಡ್ಡಿ ಪಡಿಸಿ ಹಲ್ಲೆ ಮಾಡಿದ ಎಂದು ನಮೂದಿಸಿದ್ದು, ಆಗ ಸಿಬ್ಬಂದಿಗಳಾದ ಶಹಿವುಲ್ಲಾ ಖಾನ್ ಮತ್ತು ಇತರರು ಜಗಳ ಬಿಡಿಸಿದರು ಎಂದು ನಮೂದಿಸಿದ್ದು, ಸದರಿ ಸಿಬ್ಬಂದಿಗಳು ನ್ಯಾಯಾಲಯದಲ್ಲಿ ವಿಚಾರಣೆ ಒಳಪಟ್ಟಿರುವುದಿಲ್ಲ.

22. ಫ್ರಾಸಾ-1 ರವರನ್ನು ಪಾಟೀ ಸವಾಲಿಗಗೆ ಒಳಪಡಿಸಿದಾಗ ಆರೋಪಿ ತನಗೆ ಅವಾಚ್ಯ ಶಬ್ದಗಳಿಂದ ಬೈದಿರವುದಿಲ್ಲ ಆರೋಪ ತನ್ನ ಎಡಗೆನೆಗೆ ಹೊಡೆದಿಲ್ಲ ಬದಲಾಗಿ ತನ್ನ ಕೈ ಹಿಡಿದು ಎಳೆದಾಡಿದ ಎಂದು ನುಡಿದಿರುತ್ತಾರೆ. ಮುಂದುವರಿದು ತನ್ನ ಕೈ ಕಾಲುಗಳಿಗೆ ಹೊಡೆದಿಲ್ಲ ಕೇವಲ ಸಂಬಳದ ವಿಚಾರಕ್ಕೆ ಜಗಳ ಆಗಿದೆ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ-1 ರಲ್ಲಿ ಹಳೇ ದ್ವೇಷದ ಹಿನ್ನಲೆಯಲ್ಲಿ ಏಕಾಏಕಿ ಗಲಾಟೆ ಮಾಡಿದ ಎಂದು ಹೇಳಿ ಬರೆಸಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಮುಂದುವರಿದು ಆರೋಪಿತ ತನಗೆ ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ತನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಈ ಅಂಶಗಳಿಂದ ಆರೋಪಿ ಮತ್ತು ಫ್ರಾಸಾ-1 ರವರು ಈ ಪ್ರಕರಣವನ್ನು ರಾಜೀ ಮಾಡಿಕೊಂಡಿರುವುದಾಗಿ ಕಂಡುಬರುತ್ತದೆ. ಫ್ರಾಸಾ-1 ರವರು ತಮ್ಮ ಮುಂದುವರಿದ ಹೇಳಿಕೆಯಲ್ಲಿ ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ತಾನು ನಗರ ಸಭೆಯ ಪೌರ ಕಾರ್ಮಿಕರಾದ ದಿವಾಕರ, ನಾಗರಾಜ್, ದೇವರಾಜ ಇವರಿಗೆ ಕರ್ತವ್ಯ ಹಂಚಿಕೆ ಮಾಡುತ್ತಿರುವಾಗ ಆರೋಪಿ

ಬಂದು ಕರ್ತವ್ಯಕ್ಕೆ ಅಡ್ಡಿ ಪಡಿಸಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದ ಎಂದು ನುಡಿದಿರುತ್ತಾರೆ. ಫ್ರಾಸಾ–1 ರವರು ನ್ಯಾಯಾಲಯದಲ್ಲಿ ಸದರಿ ಅಂಶಗಳನ್ನು ನುಡಿದಿರುವುದಿಲ್ಲ. ಘಟನೆಯ ಸಮಯದಲ್ಲಿ ಹಾಜರಿದ್ದರು ಎನ್ನುವ ಶಹೀಉಲ್ಲಾ ಖಾನ್ , ಇತರೆ ಪೌರ ಕಾರ್ಮಿಕರಾದ ನಾಗರಾಜ್, ದೇವರಾಜ್ ಮತ್ತು ದಿವಾಕರ್ ಫ್ರಾಸಾ–1 ರವರ ಸಾಕ್ಷ್ಯಕ್ಕೆ ಬೆಂಬಲವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಫ್ರಾಸಾ –2 ರಿಂದ 4 ರವರು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟರು ಸಹ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿರುವುದಿಲ್ಲ. ಅವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಯಾವುದೇ ಗಮನಾರ್ಹವಾದ ಅಂಶಗಳನ್ನು ಹೊರತಂದಿರುವುದಿಲ್ಲ.

**23.** ಫ್ರಾಸಾ–1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಿಪಿ–9 ಗಾಯದ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಸದರಿ ದಾಖಲೆಯನ್ನು ನೀಡಿದ ವೈಧ್ಯಾಧಿಕಾರಿಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿರುವುದಿಲ್ಲ.

**24.** ನಿಪಿ–2 ರ ಪಂಚನಾಮೆ ಕಾಲಕ್ಕೆ ದೂರುದಾರರು, ಪಂಚರಾದ ಫ್ರಾಸಾ–5 ಮತ್ತು 6, ಎ.ಎಸ್.ಐ ಸಣ್ಣಬೋರಯ್ಯನವರು ಮತ್ತು ಆರಕ್ಷಕ ಮಹಿಳಾ ಪೇದೆ ವಿಶಾಲಾಕ್ಷಿ ರವರು ಸ್ಥಳದಲ್ಲಿ ಹಾಜರಿದ್ದರು ಎಂದು ನಮೂದಿಸಿದ್ದು, ಫ್ರಾಸಾ––5 ಮತ್ತು 6 ರವರು ಪಂಚನಾಮೆಯನ್ನು ಬೆಂಬಲಿಸಿರುವುದಿಲ್ಲ, ಅವರು ನಿಪಿ–2 ಪಂಚನಾಮೆ ಮತ್ತು ನಿಪಿ–5 ನೋಟೀಸ್‌ಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದು ಸಾಕ್ಷ್ಯವನ್ನು

ನುಡಿದಿರುತ್ತಾರೆ. ನಿಪಿ–2 ರ ಅಂಶಗಳು ತಮಗೆ ಗೊತ್ತಿಲ್ಲವೆಂದು ನುಡಿದಿದ್ದು, ಅವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿ ಪರಿಣಮಿಸಿದ್ದಾರೆ. ಅವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಯಾವುದೇ ಗಮನಾರ್ಹವಾದ ಅಂಶಗಳನ್ನು ಹೊರತಂದಿರುವುದಿಲ್ಲ. ಉಳಿದಂತೆ ತನಿಖಾಧಿಕಾರಿಗಳಾದ ಫ್ರಾಸಾ–7 ಮತ್ತು 8 ರವರು ಈ ಪ್ರಕರಣದಲ್ಲಿ ಕಡತವನ್ನು ಸ್ವೀಕರಿಸಿ ಕೆಲವು ದಾಖಲೆಗಳನ್ನು ಪಡೆದುಕೊಂಡ ಬಗ್ಗೆ ಮಾತ್ರ ಸಾಕ್ಷ್ಯವನ್ನು ನುಡಿದಿರುತ್ತಾರೆ. ಫ್ರಾಸಾ–7 ಮತ್ತು 8 ರವರು ಆರೋಪಿಯನ್ನು ಗುರುತಿಸಿ ಆತನ ಕೃತ್ಯದ ಬಗ್ಗೆ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

**25.** ಸದರಿ ಪ್ರಕರಣದಲ್ಲಿ ಭಾಗಶಃ ತನಿಖಾಧಿಕಾರಿಗಳು ಮತ್ತು ಈ ಪ್ರಕಣದ ರುವಾರಿಯಾದ ಚಾಸಾ–12 ರವರು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿರುವುದಿಲ್ಲ . ಈ ಪ್ರಕರಣದ ಸಂಪೂರ್ಣ ತನಿಖೆಯನ್ನು ಚಾಸಾ–12 ರವರು ಜರುಗಿಸಿದ್ದು, ಅವರ ಸಾಕ್ಷ್ಯವು ನ್ಯಾಯಾಲಯದಲ್ಲಿ ಲಭ್ಯವಿರುವುದಿಲ್ಲ. ಬಹು ಮುಖ್ಯವಾಗಿ ಫ್ರಾಸಾ–1 ದೂರುದಾರರು ನಿಪಿ–1 ದೂರಿನನ್ವಯ ಪೂರಕವಾದ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸ್ಥಳದಲ್ಲಿ ಇದ್ದು ಘಟನೆಯನ್ನು ಕಣ್ಣಾರೇ ಕಂಡು ಜಗಳ ಬಿಡಿಸಿದರು ಎನ್ನುವ ಪೌರ ಕಾರ್ಮಿಕರಾದ ಫ್ರಾಸಾ–2 ರಿಂದ 4 ರವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿರುವುದಿಲ್ಲ. ಫ್ರಾಸಾ–1 ರವರ ನ್ಯಾಯಾಲಯದಲ್ಲಿನ ಮುಖ್ಯ ವಿಚಾರಣೆ, ಪಾಟೀ ಸವಾಲಿನ ಅಂಶಗಳು, ನಿಪಿ–1 ದೂರು ಮತ್ತು ಮುಂದುವರಿದ ಹೇಳಿಕೆಯಲ್ಲಿ ಅಂಶಗಳು ಒಂದಕ್ಕೊಂದು ವ್ಯತಿರಿಕ್ತತೆಯಿಂದ

ಕೂಡಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಫ್ರಾಸಾ–1 ರವರು ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿರುವ ವಿಚಾರವನ್ನು ಒಪ್ಪಿಕೊಂಡಿದ್ದು, ತದನಂತರ ಮಾನ್ಯ ಅಭಿಯೋಜಕರು ಆತನನ್ನು ಪಾಟೀ ಸವಾಲಿಗೆ ಒಳಪಡಿಸಿ ಗಮನಾರ್ಹವಾದ ಸಂಗತಿಗಳನ್ನು ಹೊರತಂದಿರುವುದಿಲ್ಲ. ಈ ಎಲ್ಲಾ ಚರ್ಚಿತ ಅಂಶಗಳಿಂದ ಅಭಿಯೋಜಕರು ಆರೋಪಿತನ ವಿರುದ್ಧ ಹೊರೆಸಿರುವ ಆರೋಪಗಳು ಸುಳ್ಳುನಿಂದ ಕೂಡಿದ್ದು, ದೂರಿನ ಅಂಶಗಳಿಗೆ ಯಾವುದೇ ತಿರುಳಿಲ್ಲವೆಂದು ನ್ಯಾಯಾಲಯವೂ ಅಭಿಪ್ರಾಯಿಸಿರುತ್ತದೆ. ಆರೋಪಿತನು ತಪ್ಪಿತಸ್ಥನೆಂದು ಪರಿಗಣಿಸಲು ಯಾವುದೇ ಸಮಂಜಸವಾದ ಸಾಕ್ಷ್ಯಾಧಾರಗಳು ಇಲ್ಲದ ಕಾರಣ ಅಭಿಯೋಜನೆಯ ಪ್ರಕರಣವೂ ಸುಳ್ಳಿನಿಂದ ಕೂಡಿದ್ದು, ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಸದರಿ ಸಂಶಯದ ಲಾಭವನ್ನು ಆರೋಪಿಗೆ ಕೊಡಬೇಕಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾ **ಈ ನ್ಯಾಯಾಲಯವು ಅಂಶ–1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.**

26. **<u>ಅಂಶ ನಂ.6</u>**ಃ– ಈ ಮೇಲ್ಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡ ಆದೇಶವನ್ನು ನ್ಯಾಯಾಲಯ ಮಾಡುತ್ತದೆ.

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ–248(1)ರ

ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ,

ಆರೋಪಿತನ ವಿರುದ್ಧ ಭಾರತ ದಂಡ ಸಂಹಿತೆ ಕಲಂ.323, 332, 504, 506 ಹಾಗೂ 353 ರ ಅಡಿಗಳಲ್ಲಿ ಹೊರಿಸಲಾದಂತಹ ಆರೋಪಗಳಿಂದ ವಿಮುಕ್ತಿಗೊಳಿಸಿ, ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ.

ಆರೋಪಿ ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟಿರುವಂತಹ ಜಾಮೀನು ಮುಚ್ಚಳಿಕೆಗಳು ಮುಂದಿನ 6 ತಿಂಗಳವರೆಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ-437(ಎ) ರ ಅಡಿಯಲ್ಲಿ ಮುಂದುವರಿಯತಕ್ಕದ್ದು.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಅದನ್ನು ತಿದ್ದಿ ಪರಿಷ್ಕರಿಸಿ 2026 ನೇ ಇಸವಿಯ ಜುಲೈ ತಿಂಗಳ 13 ನೇ ದಿನಾಂಕದಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)

**(ಪಾರ್ವತಮ್ಮ.ಬಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ ನ್ಯಾಯಾಲಯ, ಹಿರಿಯೂರು.**

**ಅನುಬಂಧ**

**ಅಭಿಯೋಜನೆ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ:-**

ಪ್ರಾಸಾ-1 ಃ ದುರ್ಗೇಶ್

ಪ್ರಾಸಾ-2 ಃ ದಿವಾಕರ್

ಪ್ರಾಸಾ–3 ಃ ನಾಗರಾಜ್

ಪ್ರಾಸಾ–4 ಃ ದೇವರಾಜ್

ಪ್ರಾಸಾ–5 ಃ ಟಿ. ದ್ಯಾಮಣ್ಣ

ಪ್ರಾಸಾ–6 ಃ ದುರ್ಗೇಶ್

ಪ್ರಾಸಾ–7 ಃ ಶಶಿಕಲಾ

ಪ್ರಾಸಾ–8 ಃ ನಾಗರಾಜ್ . ಟಿ. ಎಂ.

**ಆರೋಪಿತರ ಪರವಾಗಿ ವಿಚಾರಿಸಲಾದ ಸಾಕ್ಷಿಗಳ ಪಟ್ಟಿಃ–** ಇಲ್ಲ

**ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ–**

ನಿಪಿ–1 ಃ ದೂರು

ನಿಪಿ–1(ಎ) ಃ ಪ್ರಾಸಾ–1 ರವರ ಸಹಿ

ನಿಪಿ–2 ಃ ಮಹಜರ್

ನಿಪಿ–2(ಎ) ಃ ಪ್ರಾಸಾ–1 ರವರ ಸಹಿ

ನಿಪಿ–2(ಬಿ ) ಃ ಪ್ರಾಸಾ–5 ರವರ ಸಹಿ

ನಿಪಿ–2(ಸಿ ) ಃ ಪ್ರಾಸಾ–6 ರವರ ಸಹಿ

ನಿಪಿ–3 ಃ ಪ್ರಾಸಾ–3 ರವರ ಹೇಳಿಕೆ

ನಿಪಿ–4 ಃ ಪ್ರಾಸಾ–4 ರವರ ಹೇಳಿಕೆ

ನಿಪಿ–5 ಃ ನೋಟೀಸ್

ನಿಪಿ–5(ಎ) ಃ ಪ್ರಾಸಾ–1 ರವರ ಸಹಿ

ನಿಪಿ–5(ಬಿ ) ಃ ಪ್ರಾಸಾ–5 ರವರ ಸಹಿ

ನಿಪಿ–6 ಃ ಹಾಜರಾತಿ ದೃಡೀಕರಣ ಪತ್ರ

ನಿಪಿ–7 ಃ ಕರ್ತವ್ಯ ದೃಡೀಕರಣ ಪತ್ರ

ನಿಪಿ–7(ಎ) ಃ ಪ್ರಾಸಾ–7 ರವರ ಸಹಿ

ನಿಪಿ–8 ಃ ಅಧಿಕೃತ ಜ್ಞಾಪನ ಪತ್ರ

ನಿಪಿ–9 ಃ ಗಾಯದ ಪ್ರಮಾಣ ಪತ್ರ

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ–** ಇಲ್ಲ

**ಗುರುತಿಸಲಾದ ಮುದ್ದೆ ಮಾಲುಗಳುಃ–** ಇಲ್ಲ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ ನ್ಯಾಯಾಲಯ, ಹಿರಿಯೂರು.**